# ಕ್ಯಾಂಪಸ್ ಚುನಾವಣೆ: ಶಿಸ್ತಿನ ಹೆಸರಿನಲ್ಲಿ ಹಕ್ಕುಗಳು ಮೊಟಕುಗೊಳ್ಳಬಾರದು...

**ಕ್ಯಾಂಪಸ್ ಚುನಾವಣೆಗೆ ಸಂಬಂಧಿಸಿದಂತೆ ನಾವು ಬಳಸುತ್ತಿರುವ ಭಾಷೆ ಸರಿಯಿಲ್ಲ. ಪಕ್ಷ ರಾಜಕೀಯದ ಕನ್ನಡಕ ಧರಿಸಿ ನಾವು ವಿದ್ಯಾರ್ಥಿ ಚುನಾವಣೆಯನ್ನು ನೋಡಬಾರದು. ಕ್ಯಾಂಪಸ್ ವ್ಯವಹಾರಗಳನ್ನು ವಿದ್ಯಾರ್ಥಿಗಳ ವಿವೇಚನೆಗೇ ಬಿಟ್ಟುಬಿಡಬೇಕು.**

ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆಗೆ ಅವಕಾಶ ಇರಬೇಕೇ? 'ಇದ್ದರೆ ಒಳ್ಳೆಯದು' ಅಂತ ನಮ್ಮ ಉನ್ನತ ಶಿಕ್ಷಣ ಸಚಿವರು ಹೇಳಿದ್ದಾರೆ. ಅದಕ್ಕೆ ಪುನಃ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಚಿಂತನೆಯೂ ನಡೆದಿದೆಯಂತೆ. ಪ್ರಜಾಪ್ರಭುತ್ವದ ಬೇರುಗಳನ್ನು ಗಟ್ಟಿಗೊಳಿಸುವ ಪ್ರಕ್ರಿಯೆಯಲ್ಲಿ ಯುವ ಸಮೂಹದ ಪಾಲ್ಗೊಳ್ಳುವಿಕೆಗೆ ಅವಕಾಶ ಒದಗಿಸುವ ಯೋಚನೆ ಸಕಾರಾತ್ಮಕವಾದುದು. ಆದರೆ 'ಚುನಾವಣೆ ಬೇಕೇ' ಎಂಬ ಪ್ರಶ್ನೆಯನ್ನು ಪೋಷಕರ ಮುಂದಿಟ್ಟರೆ ಅಡ್ಡಡ್ಡ ತಲೆ ಆಡಿಸುವವರ ಸಂಖ್ಯೆಯೇ ಹೆಚ್ಚಿರುತ್ತದೆ. ಓದುವ ಮಕ್ಕಳಿಗೆ 'ರಾಜಕೀಯ'ದ ಸಹವಾಸ ಏಕೆ ಎಂಬ ಪ್ರಶ್ನೆ ಅದಕ್ಕೆ ಸಮರ್ಥನೆಯಾಗಿಯೂ ಬರುತ್ತದೆ. ಓದು, ಅಂಕ ಮತ್ತು ಒಳ್ಳೆಯ ಸಂಬಳ ತರುವ ಉದ್ಯೋಗ ಈ ಮೂರೇ ನಮ್ಮ ಸಾಮಾಜಿಕ ಪರಿಸರದ ಮುಖ್ಯ ಆದ್ಯತೆಗಳಾಗಿರುವ ಕಾರಣ ಹಾಗೂ ರಾಜಕೀಯದ ಬಗ್ಗೆ ಸುಶಿಕ್ಷಿತ ವಲಯದಲ್ಲಿ ನೆಲೆಯೂರಿರುವ ನಕಾರಾತ್ಮಕ ನಿಲುವು ಇಂತಹದೊಂದು ಅಭಿಪ್ರಾಯ ಗಟ್ಟಿಗೊಳ್ಳುವುದನ್ನು ಪ್ರಭಾವಿಸುತ್ತಾ ಬಂದಿದೆ.

ಪ್ರಜಾಪ್ರಭುತ್ವದಲ್ಲಿ ಅತ್ಯಂತ ಮುಖ್ಯವಾದ ಪರಿಕಲ್ಪನೆ ಚುನಾವಣೆ. ಆದರೆ, ಈ ಪರಿಕಲ್ಪನೆಯನ್ನು ನಗಣ್ಯಗೊಳಿಸುವ ಕೆಲಸ ನಮ್ಮಲ್ಲಿ ಬೇರೆ ಬೇರೆ ಹಂತಗಳಲ್ಲಿ, ಬೇರೆ ಬೇರೆ ಬಗೆಯಲ್ಲಿ ನಡೆಯುತ್ತಿದೆ. 'ರಾಜಕೀಯ'ದ ಬಗ್ಗೆ ವಿಪರೀತ ಎನ್ನುವಷ್ಟು ಮಾತನಾಡುತ್ತೇವೆ. ಆದರೆ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ನಿರಾಕರಿಸುತ್ತೇವೆ. ಇದರಿಂದ ಮಕ್ಕಳನ್ನೂ ದೂರ ದೂಡಲು ಬಯಸುತ್ತೇವೆ. ನಮ್ಮ ಜನಸಂಖ್ಯೆಯಲ್ಲಿ ಶೇಕಡ 45ಕ್ಕೂ ಹೆಚ್ಚು ಮಂದಿ 25 ವರ್ಷಕ್ಕಿಂತ ಕೆಳಗಿನವರು. ಇಂತಹ ದೊಡ್ಡ ಯುವ ಸಮೂಹವು ನಾಯಕತ್ವ ಪರೀಕ್ಷೆಯ ನಿಕಷಕ್ಕೆ ಒಡ್ಡಿಕೊಳ್ಳಲು ಕ್ಯಾಂಪಸ್ ಚುನಾವಣೆಗಳು ವೇದಿಕೆ ಒದಗಿಸುತ್ತವೆ. ಕ್ಯಾಂಪಸ್ ಎಂಬುದು ಬದುಕಿನ ಬಹುಮುಖ್ಯ ಘಟ್ಟ. ವಿದ್ಯಾರ್ಥಿಗಳು ಪ್ರಜಾಸತ್ತಾತ್ಮಕವಾಗಿ ಸಂಘಟಿತರಾಗಲು ಈ ಚುನಾವಣೆಗಳು ಅವಕಾಶ ಒದಗಿಸುತ್ತವೆ. ಶಿಸ್ತಿನ ಹೆಸರಿನಲ್ಲಿ ಹಕ್ಕುಗಳು ಮೊಟಕುಗೊಳ್ಳುವುದನ್ನು ಅದು ತಪ್ಪಿಸಬಲ್ಲದು. ವಿದ್ಯಾರ್ಥಿ ಪ್ರತಿನಿಧಿಗಳು, ಆಡಳಿತ ಮಂಡಳಿ ಮತ್ತು ವಿದ್ಯಾರ್ಥಿಗಳ ನಡುವೆ ಸೇತುವೆಯಾಗಿ ಕೆಲಸ ಮಾಡಬಹುದು.

ಕ್ಯಾಂಪಸ್ ಚುನಾವಣೆಗೆ ಸಂಬಂಧಿಸಿದಂತೆ ನಾವು ಇಲ್ಲಿಯವರೆಗೆ ಬಳಸುತ್ತಿರುವ ಪರಿಭಾಷಿಕವೇ ಸರಿ ಇದ್ದಂತಿಲ್ಲ. ಪಕ್ಷ ರಾಜಕೀಯದ ಹೊಲಬುಗೇಡಿತನ ಮೆತ್ತಿಕೊಂಡಿರುವ ಕನ್ನಡಕ ಧರಿಸಿ ನಾವು ವಿದ್ಯಾರ್ಥಿ ಸಂಘಟನೆಗಳ ಚುನಾವಣೆಯನ್ನು ನೋಡಬಾರದು. ಕ್ಯಾಂಪಸ್ ಒಳಗಿನ ವ್ಯವಹಾರಗಳನ್ನು ಆ ವಿದ್ಯಾರ್ಥಿಗಳ ವಿವೇಚನೆಗೇ ಬಿಟ್ಟುಬಿಡಬೇಕು. ಅವರನ್ನು ಪ್ರತಿನಿಧಿಸಲು ಒಂದಕ್ಕಿಂತ ಹೆಚ್ಚು ಸಂಘಟನೆಗಳು ಒಡಮೂಡುವಂತಹ ವಾತಾವರಣ ನಿರ್ಮಿಸಬೇಕು. ಆ ಅಕಡೆಮಿಕ್ ಚೌಕಟ್ಟಿನಲ್ಲಿ ಅವರು ಸಂಘಟಿತರಾಗಲು, ಸಂಭ್ರಮಿಸಲು, ಪ್ರತಿಭೆ ಪ್ರದರ್ಶಿಸಲು, ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಅನುವಾಗಿಸುವುದಕ್ಕೆ ಚುನಾವಣೆ ನೆರವಾಗಬೇಕು. ಹೊರಗಿನ ಶಕ್ತಿಗಳು ಮೂಗು ತೂರಿಸಬಾರದು. ಸರ್ಕಾರದ ಹಸ್ತಕ್ಷೇಪ ಇರಕೂಡದು. ರಾಜಕೀಯ ಪಕ್ಷಗಳ ನೆರಳು ಕೂಡ ಸೋಕಬಾರದು. ಹೊರಗಿನವರ ಪ್ರವೇಶ ನಿರ್ಬಂಧಿಸಲು ಸಾಧ್ಯವಾದರೆ ಕ್ಯಾಂಪಸ್‌ಗಳಲ್ಲಿ ಗರಿಗರಿಯಾದ ಹೊಚ್ಚಹೊಸ ನಾಯಕತ್ವ ಅರಳಬಲ್ಲದು. ಆದರೆ ಹಾಗೆ ನಿರ್ಬಂಧಿಸುವುದೇ ಇವತ್ತಿನ ಬಹುದೊಡ್ಡ ಸವಾಲಾಗಿ ಪರಿಣಮಿಸಬಹುದು.

ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಚುನಾವಣೆಗೆ ಪುನಃ ಅವಕಾಶ ಕಲ್ಪಿಸುವ ಮೊದಲು ಇಂತಹ ಹಲವು ವಿಚಾರಗಳ ಬಗ್ಗೆ ಸಾರ್ವಜನಿಕ ವೇದಿಕೆಗಳಲ್ಲಿ ಚರ್ಚೆಗಳು ಆಗಬೇಕು. ತಜ್ಞರ ಜತೆ ಸಮಾಲೋಚಿಸಬೇಕು. ಚುನಾವಣೆಯ ಅಗತ್ಯ, ಉದ್ದೇಶಗಳ ಬಗ್ಗೆ ಸ್ಪಷ್ಟತೆ ಮೂಡಬೇಕು. ಸ್ಟೂಡೆಂಟ್ಸ್ ಯೂನಿಯನ್ ಚುನಾವಣೆಗಳಲ್ಲಿ ಹಿಂದೆ ತೋಳ್ಬಲದ ಅಟ್ಟಹಾಸ ಮೆರೆದ ನಿದರ್ಶನಗಳು ಹೇರಳವಾಗಿ ಸಿಗುತ್ತವೆ. ಚುನಾವಣೆಗಳು ಹಿಂಸೆ, ದಾಂದಲೆಗೆ ತಿರುಗಿ ಅನಪೇಕ್ಷಿತ ಪರಿಣಾಮಗಳಿಗೆ ದಾರಿ ತೆಗೆದಿದ್ದನ್ನು ಮರೆಯಲಾಗದು. ಸಮಾಜ ಹಿಂದೆಂದಿಗಿಂತ ಈಗ ಹೆಚ್ಚು ಧ್ರುವೀಕರಣಗೊಂಡಿದೆ. ಯಾವುದೇ ಒಂದು ಮಹತ್ವದ ವಿಷಯದ ಕುರಿತು ಮುಕ್ತ ಚರ್ಚೆ, ಸಂವಾದ ಕೂಡ ಸಾಧ್ಯವಿಲ್ಲವೇನೋ ಎಂಬ ವಿಷಮ ಸ್ಥಿತಿ ನೆಲೆಗೊಂಡಿದೆ. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ನಡೆದ ಪ್ರಸಂಗಗಳು ಇನ್ನೂ ನೆನಪಿನಿಂದ ಮಾಸಿಲ್ಲ. ಸಮಕಾಲೀನ ಸಂದರ್ಭದ ಈ ಎಲ್ಲ ಬೆಳವಣಿಗೆಗಳನ್ನು ಗಮನದಲ್ಲಿ ಇರಿಸಿಕೊಂಡು, ಸ್ಪಷ್ಟ ನೀಲನಕಾಶೆಯೊಂದಿಗೆ ಅಂತಿಮ ನಿರ್ಣಯಕ್ಕೆ ಬರುವುದು ಒಳಿತು.



ಈಶ್ವರ

**ಎನ್. ಉದಯಕುಮಾರ್**